67

# ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರು ಇವರು ನಿಯಮ 72ರಡಿ 2023ರ ಹಿಂದಿನ ಸರ್ಕಾರದಲ್ಲಿ ರಾಜ್ಯದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಶೇ.15 ರಷ್ಟು ವೇತನ ಹೆಚ್ಚಳ ಮಾಡುವ ಆದೇಶ ಹೊರಡಿಸಿದ್ದು, 2023 ಚುನಾವಣೆಯ ನೀತಿ ಸಂಹಿತೆ ಜಾರಿಗೆ ಬಂದ ಕಾರಣ ವೇತನ ಹೆಚ್ಚಳದ ಆದೇಶ ಜಾರಿಗೆ ಬಂದಿರಲಿಲ್ಲ, ಕಳೆದ 7 ತಿಂಗಳಿನಿಂದ ಸದರಿ ಗುತ್ತಿಗೆ ಸಿಬ್ಬಂದಿಗಳಿಗೆ ಶೇ.15 ರಷ್ಟು ಹೆಚ್ಚಳಗೊಂಡ ವೇತನ ನೀಡಿರುವುದಿಲ್ಲ. ಇವರಿಗೆ ಬಾಕಿ ಇರುವ ಶೇ.15ರಷ್ಟು ಹೆಚ್ಚಳ ವೇತನವನ್ನು ನೀಡುವ ಬಗ್ಗೆ:-**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ:-**

*********

ಆದೇಶ ಸಂಖ್ಯೆ: ಆಕುಕ 43 ಎಫ್ ಪಿ ಎಸ್ 2020, ದಿನಾಂಕ: 04.03.2023 ರನ್ವಯ ರಾಜ್ಯ ಸರ್ಕಾರವು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಕರ್ತವ್ಯ ನಿರ್ವಹಿಸುತ್ತಿರುವ ಗುತ್ತಿಗೆ ನೌಕರರಿಗೆ ಸಂಭಾವನೆಯನ್ನು ದಿನಾಂಕ: 01.04.2023 ರಿಂದ ಜಾರಿಗೆ ಬರುವಂತೆ (one time increase of 15% over existing remuneration is agreed to) ಹೆಚ್ಚಿಸಿ ಆದೇಶಿಸಲಾಗಿರುತ್ತದೆ.

ಆದೇಶ ಸಂಖ್ಯೆ: ಆಕುಕ 140 ಎಫ್.ಪಿ.ಎಸ್ 2023, ದಿನಾಂಕ:2 9.09.2023ರನ್ವಯ ಒಳಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಅರ್ಹ ನೌಕರರ ಒಟ್ಟು ಸಂಖ್ಯೆ 17055 ಇದ್ದು, ಇವರುಗಳಿಗೆ ಶೇ.15ರಷ್ಟು ವೇತನ ಹೆಚ್ಚಳ ಮಾಡಲು ಒಟ್ಟು ರೂ.5796.21 ಲಕ್ಷಗಳ ಅನುದಾನವನ್ನು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ. ಇದರನ್ವಯ, ಒಳಗುತ್ತಿಗೆ ಸಿಬ್ಬಂದಿಗಳಿಗೆ ಶೇ.15ರಷ್ಟು ವೇತನ ಹೆಚ್ಚಳ ಪಾವತಿ ಮಾಡಲಾಗಿರುತ್ತದೆ.

2024-25ನೇ ಸಾಲಿಗೆ ಶೇ.15ರಷ್ಟು ವೇತನ ಹೆಚ್ಚಳವನ್ನು ನೀಡುವ ಬಗ್ಗೆ, ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

**ಆಕುಕ 89 ಎಸ್ ಟಿ ಕ್ಯೂ 2024**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು